

# ಭವಾನಿಯ ಉಸಿರ್ದಾಣ







**ಒಬ್ಬ ಕಲಾವಿದ ಮತ್ತೊಬ್ಬ ಕಲಾವಿದರ ಸೃಜನಶೀಲತೆ ಗುರುತಿಸುವ, ಆಸ್ವಾದಿಸುವ ಒಂದು ಕಲಾನೋಟವಿದು.**

**■ ವಿಷ್ಣುಕುಮಾರ್. ಎಸ್**

*Everything just as it is, as it is, as is. Flowers in bloom. Nothing to add.* -Robert Aitken, Roshi, As it Is

ನಿಸರ್ಗದ ಸೊಬಗು ನೋಟವನ್ನು ಸೆಳೆದು ಮನ ತಣಿಸಿದರೆ, ಅದರ ರಹಸ್ಯ, ವಿಸ್ಮಯಗಳು ಜ್ಞಾನ– ವಿಜ್ಞಾನಕ್ಕೆ ಸವಾಲೆಸೆಯುತ್ತದೆ. ಕವಿ– ಕಲಾವಿದರ ಉಸಿರ್ದಾಣವಾದ ಪ್ರಕೃತಿ, ತನ್ನ ಸೆರಗಿನ ಹಾಸಿನ ಮೇಲೆ ಅವರಿಗೊಂದು ಗಟ್ಟಿ ನೆಲೆ ನೀಡುತ್ತದೆ. ಕ್ರಿಯಾಶೀಲ ಹುಚ್ಚು ಮನಸ್ಸಿಗೆ ಹತ್ತು ಮುಖಗಳು ಮೂಡುವುದು ಇಲ್ಲಿಯೇ. ಅದಕ್ಕಾಗಿ ಬಹಳಷ್ಟು ಸೃಜನಶೀಲರು ತಮ್ಮ ಕರ್ಮ ಭೂಮಿಯನ್ನಾಗಿ ಪ್ರಕೃತಿಯ ಮಡಿಲನ್ನು ಆರಿಸಿಕೊಳ್ಳುತ್ತಾರೆ.

ಕರ್ನಾಟಕದ ಕಾಶ್ಮೀರ ಎನಿಸಿಕೊಂಡಿರುವ ಕೊಡಗು ಪ್ರದೇಶದಲ್ಲಿ ಹಚ್ಚಹಸಿರಿನ ಮಲೆ ಪರ್ವತಗಳು ಅವತರಿಸಿ ನಿಂತಿವೆ. ಜೀವನದಿ ಕಾವೇರಿಗೆ ಬಸಿರು ನೀಡಿರುವ ತಲಕಾವೇರಿಯೂ ಇಲ್ಲಿಯವಳೆ. ಇಲ್ಲಿನ ಪರಿಸರ ಬಣ್ಣನೆಗೆ ನಿಲುಕದ್ದು. ಇದರ ನೆನಪಿನ ಕಾಡಾಟಕ್ಕೆ ಆಕೃತಿ ನೀಡುವ ಕೆಲಸವನ್ನು ಮಾಡಿರುವ ಕಲಾವಿದರಲ್ಲಿ ಭವಾನಿ ಕೂಡ ಒಬ್ಬರು. ಅಲ್ಲಿನ ಹೂವು– ಹಣ್ಣು, ಹಸಿರಿನ ಉಸಿರು, ಜುಳು, ಜುಳು ಹರಿಯುವ ನೀರಿನ ನಿನಾದವನ್ನು ಸೆರೆ ಹಿಡಿಯುವ ಪ್ರಯತ್ನವನ್ನು ಅವರು ಮಾಡಿದ್ದಾರೆ.

ಪ್ರಕೃತಿಯ ರಹಸ್ಯ ಪ್ರಶ್ನಿಸಿ ಕ್ಯಾಮೆರಾ ಹಿಡಿದು ನಿಂತ ಈ ಯುವತಿ ಅಲ್ಲಿನ ಸೊಬಗಿಗೆ ಕಣ್ನೋಟದ ಮೆರಗು ತುಂಬಿದ್ದಾರೆ. ಆ ನಿಟ್ಟಿನ ಹುಡುಕಾಟವನ್ನೇ ತಮ್ಮ ಬದುಕಿನ ಭಾಗವನ್ನಾಗಿ ಮಾಡಿಕೊಂಡಿರುವ ಅವರು ಸಮಯ ಸಿಕ್ಕಾಗ ಬಣ್ಣದಲ್ಲಿ ಲೀನವಾಗಿ ಕ್ಯಾನ್ವಾಸಿನ ಮೇಲೆ ಹಸಿರೆಲೆ ಚಿಗುರಿದಂತೆ ತಮ್ಮ ಚಿತ್ತಾರದ ಚಿಂತನೆಯನ್ನು ಹರಿಬಿಡುತ್ತಾರೆ. ವಿಡಿಯೋಗ್ರಫಿಯ ಗೀಳಿಗೆ ಬಿದ್ದ ಇವರು 'ಜರ್ನಿ ವಿತ್ ರಿವರ್ ಕಾವೇರಿ' ಎಂಬ ಸಾಕ್ಷ್ಯಚಿತ್ರಕ್ಕೂ ಕಾರಣರಾಗಿದ್ದಾರೆ.

ಚಿತ್ರಕಲೆ, ಫೋಟೋಗ್ರಫಿಯನ್ನೇ ತಮ್ಮ ಬದುಕಿನ ಭಾಗವನ್ನಾಗಿ ಮಾಡಿಕೊಂಡಿರುವ ಜಿ.ಎಸ್.ಭವಾನಿ ಹಲವಾರು ಕಲಾಕೃತಿಗಳನ್ನು ಮೂಡಿಸಿದ್ದಾರೆ. ಇತ್ತೀಚೆಗೆ ಅಂತಹ ಹತ್ತಾರು ಅವರ ಕಲಾಕೃತಿಗಳು ಬೆಂಗಳೂರಿನ ಹ್ಯಾಬಿಟ್ ಆರ್ಟ್ ಗ್ಯಾಲರಿಯಲ್ಲಿ ಪ್ರದರ್ಶನ ಕಂಡವು. ಅದರಲ್ಲಿ ಅವರು ಕೊಡಗಿನ ಪರಿಸರ, ನೋಡುಗರ ಗ್ರಹಿಕೆಗೆ ಸಿಗಬಲ್ಲ ಹೂವು, ಹಣ್ಣು, ಗಿಡ, ಮರ, ಎಲೆ, ಹುಲ್ಲು, ಹಣ್ಣು ಅದರ ಜೊತೆ ಪ್ರಾಣಿ ಪಕ್ಷಿಗಳ ನಡುವಿನ ಆಂತರಿಕ ಸಂಬಂಧವನ್ನು ಪ್ರತಿಫಲಿಸುವ ಮೂಲಕ ಅಸದೃಶ್ಯ ನಿಸರ್ಗವನ್ನು ತಮ್ಮ ಗ್ರಹಿಕೆಯಲ್ಲಿ ತುಂಬಿಕೊಡುವ ಪ್ರಯತ್ನ ಮಾಡಿದ್ದಾರೆ. ತಮಗೆ ಸ್ಫೂರ್ತಿಯ ಸೆಲೆಯಾದ ತವರು ನಾಡಿನ ಅಭಿಮಾನವನ್ನು ಪ್ರತಿಬಿಂಬಿಸುವ ಅವರು ಕೆಲವೆಡೆ ತಂತ್ರಗಾರಿಕೆಯನ್ನೂ ಬಳಸಿದ್ದಾರೆ. ಈ ತಂತ್ರಗಾರಿಕೆ ನಿಸರ್ಗ ಸಹಜ ನೋಟಕ್ಕೆ ಕೃತಕ ಎನ್ನಿಸಿದರೂ ಆಶ್ಚರ್ಯವಿಲ್ಲ. ಒಟ್ಟಾರೆ ಅವರ ವೈಯಕ್ತಿಕ ಅನುಭವನ್ನು ಸಮುದಾಯದ ನೆಲೆಯಲ್ಲಿ ಅನಾವರಣಗೊಳಿಸುವ ಪ್ರಯತ್ನ ಮೆಚ್ಚುವಂತದ್ದು. ಸಂಪೂರ್ಣ ನಿಸರ್ಗವನ್ನೆ ತಮ್ಮ ಚಿಂತನಾ ಕ್ಷೇತ್ರವನ್ನಾಗಿ ಮಾಡಿಕೊಂಡು ಹೊಸ ಹೊಸ ಸಾಧ್ಯತೆಗಳನ್ನು ಆವಿಷ್ಕರಿಸುವ ಪ್ರಯತ್ನವನ್ನು ಅವರು ನಡೆಸಿದ್ದಾರೆ ಎಂದೆನಿಸುತ್ತದೆ.